ಲೋಕಾನ ದಾಟೋದು ಗಂಡು ಅವಳಿಂದ ಒಬ್ಬನೇ ಆದಾಗ. ಅವಳೇ ಸಖಿ–ಪ್ರಿಯವಾದದ್ದನ್ನು ಹೇಳತಾಳೆ. ಧರ್ಮದ ಮಾತು ಬಂದಾಗ ಅವಳೇ ತಂದೆ, ದುಃಖದಲ್ಲಿರೋವಾಗ ಅವಳೇ ತಾಯಿ. ತಿಳಕೋ.

ಮನೆ ನಡೆಸಿ ಮಕ್ಕಳು ಹೆತ್ತು ಗಂಡನ ಜೀವ ಆಗಿ ಗಂಡನ ಹಿಂದೇನೆ ನಡದು ಹೆಣ್ಣು, ಹೆಂಡತಿ ಅನಿಸಿಕೋತಾಳೆ. ಗಂಡನ ಅರ್ಧ – ಹೆಂಡತಿ. ಅವನ ಸಖೀ. ಅವನು ಬದುಕಿರಲಿ, ಪ್ರೇತವಾಗಿ ಅಲೀತಿರಲಿ, ನರಕದಲ್ಲಿ ಬಿದ್ದಿರಲಿ. ಹೆಂಡತಿ ಅವನ ಹಿಂದೇನೆ ಇರತಾಳೆ. ತಾನು ಮೊದಲು ಸತ್ತರೆ ಅಲ್ಲಿ ಗಂಡನಿಗೆ ಕಾಯತಿರತಾಳೆ, ಗಂಡ ಮೊದಲು ಸತ್ತರೆ ಅವನ ಹಿಂದೇನೇ ಹೊರಡತಾಳೆ. ಅದಕ್ಕೇ ಮದುವೇನ ಪಾಣಿಗ್ರಹಣ ಅನ್ನೋದು. ಇಲ್ಲೂ ಅಲ್ಲೂ ಅವಳು ಕೈ ಬಿಡೋದೇ ಇಲ್ಲ.

ಮಗ ಅಂದರೆ ತನ್ನಿಂದ ಬಂದ ತಾನೇನೇ ಅಂತಾರೆ ತಿಳಿದವರು. ಅಂದರೆ ಮಗನ ತಾಯಿ ತನ್ನ ತಾಯೀನೇ ಅಂತಾಯಿತು. ಹೆಂಡತೀಲಿ ಬಂದ ಮಗ ಅಪ್ಪನಿಗೆ ಕನ್ನಡೀ ಹಾಗೆ. ಅದರಲ್ಲಿ ತನ್ನ ನೋಡಿಕೋತಾ ಪುಣ್ಯವಂತ ಸ್ವರ್ಗ ಕಂಡಷ್ಟು ಖುಷಿಪಡತಾನೆ.

ಮನಸಿನ ದುಃಖ, ಮೈಯಿನ ರೋಗದಿಂದ ಪರಿತಾಪ ಪಡೋ ಗಂಡ, ಧರ್ಮಕ್ಕೆ ಬಾಯಿಬಿಡೋನು, ತನ್ನ ಹೆಂಡತೀಲಿ ಸುಖ ಕಾಣತಾನೆ. ಬೇಗೇಲಿ ದಣಿದೋರು ನೀರು ಕಂಡ ಹಾಗೆ.

ಅವನ ಖುಷಿ, ಅವನ ಪ್ರೀತಿ, ಅವನ ಧರ್ಮ ಎಲ್ಲಾ ಇರೋದು ಅವಳ ಹತ್ತಿರಾನೇ. ಅವನು ಹುಟ್ಟೋ ನೆಲೆ ಅವಳು. ಅವನು ತಂಗೋ ತಳ ಅವಳು. ಅವಳಿಲ್ಲದೆ ಮಕ್ಕಳು ಮಾಡೋಕ್ಕೆ ಋಷಿಗಳಿಗೂ ಆಗಲ್ಲ. ಮೈಯೆಲ್ಲಾ ಧೂಳು ಮಾಡಿಕೊಂಡು ಬಂದ ಮಗು ಅಪ್ಪ ಅಂತಾ ತಬ್ಬೆತ್ತಲ್ಲಾ ಅದಕ್ಕಿಂತ ಸುಖ ಬೇರೊಂದಿದೆಯಾ.

ಆ ನಿನ್ನ ಮಗು, ತಾನೇ ನಿನ್ನ ಹತ್ತಿರ ಬಂದಿದೆ. ಆಸೆಯಿಂದ ಕಡೆಗಣ್ಣಲ್ಲಿ ನಿನ್ನನ್ನೇ ನೋಡತಾ ಇದೆ. ಒಂದು ಸಣ್ಣ ಇರುವೆ ಸುದ ಅದರ ಮೊಟ್ಟೇನ ಒಡೀದ ಹಾಗೆ ಎತ್ತಿಕೊಳ್ಳತ್ತೆ. ಧರ್ಮ ತಿಳಿದವನು ನೀನು. ನಿನ್ನ ಮಗೂ ಇದು. ಎತ್ತಿಕೊಳ್ಳಲ್ಲವಾ? ಒಳ್ಳೇ ಬಟ್ಟೆ, ಹೆಣ್ಣು, ನೀರು – ಮುಟ್ಟೋಕೆ ಚಂದ. ಆದರೆ ಮಗೂನ ಮುಟ್ಟಿ ತಬ್ಬಿಕೊಂಡರೆ ಆಗೋ ಖುಷಿ ಅದಕ್ಕಿಂತ ಮಿಗಿಲು.

ರಾಜಾ, ತಿಂಗಳಲ್ಲ, ವರ್ಷಗಳೇನೋ ಎಂಬಂತೆ ಬಸಿರಲ್ಲಿ ಹೊತ್ತಿದೇನೆ. ಈ ನಿನ್ನ ಮಗ ನಿನ್ನ ಶೋಕ ಕಳೀತಾನೆ. ‘ಇವನು ನೂರು ಅಶ್ವಮೇಧ ಮಾಡತಾನೆ’ ಅಂತ ಇವನನ್ನ ಹೆರೋವಾಗ ಒಂದು ದನಿ ಆಕಾಶದಿಂದ ಹೇಳಿತ್ತು.

ಮಕ್ಕಳಿಗೆ ಹೆಸರಿಡೋ ಹೊತ್ತಲ್ಲಿ ಬ್ರಾಹ್ಮಣರು ಹೇಳೋ ವೇದ ಮಂತ್ರ ನಿನಗೂ ಗೊತ್ತು. ‘ನನ್ನ ಮೈಯ ಒಂದೊಂದು ಅಂಗದಿಂದಲೂ ಉಂಟಾಗಿದೀ ನೀನು. ನನ್ನ ಹೃದಯದಿಂದ ಹುಟ್ಟಿದೀಯ. ನೀನು ನಾನೇನೇ, ನನ್ನ ಪೀಳಿಗೆ ಉಳಿಯೋದು ನಿನ್ನಿಂದ, ನನ್ನ ಬದುಕು ನಿನ್ನ ಕೈಲಿದೆ ನೂರು ಕಾಲ ಸುಖವಾಗಿ ಬಾಳು ಪುತ್ರಾ’.

ಇವನೂ ನಿನ್ನ ಮೈಯಿಂದ ಬಂದವನು. ಒಂದು ಗಂಡಸು ಇನ್ನೊಂದು ಗಂಡಸಾಗಿ ಮೂಡಿದಾನೆ. ತಿಳಿಯಾದ ಕೊಳದಲ್ಲಿ ಪಡಿನೆಳಲು ಮೂಡೋ ಹಾಗೆ–ನೀನೇ ಇವನು. ಮನೆಯೊಳಗಿನ ಅಗ್ನಿಹೋತ್ರದ ಬೆಂಕಿಯಿಂದ ಹೊರಗಿನ ಯಜ್ಞದ ಬೆಂಕಿ ಮೂಡಿದ ಹಾಗೆ ಇವನು ನಿನ್ನಿಂದ ಮೂಡಿದಾನೆ. ನೀನು ಒಬ್ಬನೇ ಇದ್ದೆ. ಈಗ ಇಬ್ಬರಾಗಿದೀಯ.

ಆಗ... ನೆನಪಿಸಿಕೊ,

ನೀನು ಮೃಗಾನ ಅಟ್ಟಿಸಿಕೊಂಡು ಹೋಗತಾ ಇದ್ದೆ. ಆ ಮೃಗದಿಂದ ದಾರಿ ತಪ್ಪಿ ನನ್ನ ಹತ್ತಿರ ಬಂದೆ. ಅಪ್ಪನ ಆಶ್ರಮದಲ್ಲಿದ್ದೆ ನಾನು.

ಊರ್ವಶೀ, ಪೂರ್ವಚಿತ್ತೀ, ಸಹಜನ್ಯಾ, ಮೇನಕಾ, ವಿಶ್ವಾಚೀ, ಘೃತಾಚಿ ಅಂತ ಈ ಆರು ಜನ, ಅಪ್ಸರೇರಲ್ಲೇ ಹೆಚ್ಚುಗಾರಿಕೆ ಅಪ್ಸರೇರು ಇವರು. ಅವರಲ್ಲಿ ಮೇನಕೆ ಬ್ರಹ್ಮನ ಮಗಳು. ಸ್ವರ್ಗದಿಂದ ಭೂಮಿಗೆ ಬಂದು ವಿಶ್ವಾಮಿತ್ರನಿಂದ ನನ್ನ ಹೆತ್ತಳು. ಹಿಮಾಲಯದಲ್ಲಿ ನನ್ನನ್ನ ಹೆತ್ತು, ಕಂಡವರ ಮಗು ಎನ್ನೋ ಹಾಗೆ ಬಿಸಾಡಿ ಹೊರಟು ಹೋದಳು. ಹೆಣ್ಣಲ್ಲ ಅವಳು.

ಯಾರಿಗೆ ಯಾವ ಕೆಡುಕು ಮಾಡಿದ್ದೆನೋ ನಾನು, ಹುಟ್ಟಿದಾಗ ಹೆತ್ತೋರು ಕೈಬಿಟ್ಟರು. ಈಗ ನೀನು ಕೈಬಿಡತಿದೀಯ. ನನ್ನನ್ನ ತೊರೆದರೆ ಪರವಾಗಿಲ್ಲ, ನಮ್ಮಾಶ್ರಮಕ್ಕೆ ಹೋಗತೀನಿ. ಆದರೆ ದಮ್ಮಯ್ಯ ಈ ನಿನ್ನ ಕಂದನ ಕೈ ಬಿಡಬೇಡ.

**ದುಷ್ಯಂತ:** ಶಕುಂತಲೇ, ನೀನು ಹೆತ್ತಿರೋ ಈ ಹುಡುಗ ನನಗೆ ಗೊತ್ತಿಲ್ಲ. ಆ ಕಟುಕ ಜಾರಿಣಿ ಮೇನಕೆ ನಿಮ್ಮಮ್ಮ ಅಂತೀಯಾ. ಬಾಡಿದ ಹೂಮಾಲೆ ಥರ ನಿನ್ನ ಎಸೆದು ಹೋದಳು ಅಂತೀಯ. ನೀ ಹೇಳುವುದನ್ನು ನೋಡಿದರೆ ಆ ವಿಶ್ವಾಮಿತ್ರನು ಕಚ್ಚೆಹರುಕಾನೇ. ಕ್ಷತ್ರಿಯನಾಗಿ ಹುಟ್ಟಿದ – ಬ್ರಾಹ್ಮಣನಾಗತೀನಿ ಅಂತ ತಪಸ್ಸಿಗೆ ಕೂತ. ಮೇನಕೇನ ಕಂಡ ತಕ್ಷಣ ಜಾರಿಬಿದ್ದ. ನಾಚಿಕೆ ಇಲ್ಲದೆ ಕತೆ ಬಿಡತೀಯಲ್ಲ, ಅದೂ ನನ್ನ ಮುಂದೇನೆ. ಏ ದುಷ್ಟ ತಾಪಸೀ ನಡೆಯಾಚೆ.

ಗೊತ್ತು ನನಗೂ, ಅವನು ದೊಡ್ಡ ತಾಪಸಿ. ತುಂಬಾ ಮೇಲಾದವನು. ಮೇನಕೆ ಹೆಸರಾದ ಅಪ್ಸರೆ. ನೀನು ಬೈರಾಗಿ ವೇಷ ತೊಟ್ಟೋಳು. ಅವರೆಲ್ಲಿ, ನೀನೆಲ್ಲಿ. ಹೆಂಗಸರ ಮಾತೆಲ್ಲ ಸುಳ್ಳು. ಅದರಲ್ಲಿ ವಿಶ್ವಾಸ ಇಡಕ್ಕಾಗಲ್ಲ.

ನಿನ್ನ ಮಗನಿಗೆ ವಯಸಿಗೆ ಮೀರಿದ ಮೈಯಿ. ಅವನ ಬಲವೂ ಆ ವಯಸಿಗೆ ಮೀರಿದ್ದೇ. ಇಷ್ಟು ಸ್ವಲ್ಪ ಕಾಲದಲ್ಲಿ ಸಾಲವೃಕ್ಷದ ಹಾಗೆ ಇಷ್ಟುದ್ದ ಬೆಳೆದು ಬಿಟ್ಟನಾ – ನಿಂದು ನೀಚ ಯೋನಿ ಇರಬೇಕು, ಮಾತು ನೋಡಿದರೆ ಗಂಡಸರ ತೆವಲವಳು ಅನ್ನಿಸತ್ತೆ.

ನಿಮ್ಮಮ್ಮ ಮೇನಕೇನೇ ಅಂತ ಇಟ್ಟುಕೊಂಡರೂ ತೀಟೆ ತಡೀಲಾರದೆ ಯಾರನ್ನೋ ಕೂಡಿ ನಿನ್ನ ಹೆತ್ತಿರಬೇಕು. ನೋಡು ತಾಪಸಿ, ನೀ ಹೇಳೋದೊಂದೂ ನನ್ನ ಕಣ್ಣೆದುರು ನಡೆದದ್ದಲ್ಲ. ನೀನು ಯಾರು ಅಂತಲೂ ನನಗೆ ಗೊತ್ತಿಲ್ಲ. ನಡೆ ನೀನಿನ್ನು ನಿನ್ನಿಷ್ಟ ಬಂದ ಕಡೆಗೆ.

**ಶಕುಂತಲೆ:** ಬೇರೆಯವರ ಬಿರುಕು ಸಾಸಿವೆಯಷ್ಟಿದ್ದರೂ ಕಾಣತ್ತೆ ನಿನಗೆ, ನಿನದೇ ಬಿರುಕು ಬಿಲ್ವದಕಾಯಿ ಗಾತ್ರ ಇದ್ದರೂ ನೋಡಿಕೊಳ್ಳಲ್ಲವಲ್ಲಾ. ಮೇನಕೆ ದೇವತೆಗಳ ಲೋಕದಲ್ಲಿರೋಳು, ದೇವತೆಗಳೇ ಅವಳ ಹಿಂದೆ ಸುತ್ತುತಾ ಇರತಾರೆ. ದುಷ್ಯಂತ, ನಿನ್ನ ಜನ್ಮಕ್ಕಿಂತ ನನ್ನ ಜನ್ಮ ತೀರಾ ದೊಡ್ಡದು–ತಿಳಕೋ. ನೀನು ಬರೀ ನೆಲದ ಮೇಲೆ ಓಡಾಡೋನು, ನಾನು ಆಕಾಶದಲ್ಲೂ ಓಡಾಡತೀನಿ. ನನ್ನ ನಿನ್ನ ವ್ಯತ್ಯಾಸ ಇಷ್ಟೇ – ನಾ ಮೇರು, ನೀ ಸಾಸಿವೆ ಕಾಳು–ತಿಳೀತಾ. ಮಹೇಂದ್ರ, ಕುಬೇರ, ಯಮ, ವರುಣರ ಜೊತೆ ಓಡಾಡಬಲ್ಲೆ ನಾನು. ರಾಜಾ, ನನ್ನ ಸತ್ವ ಪ್ರಭಾವ ಎಷ್ಟು ಗೊತ್ತಾಯಿತಾ?

ಮಾತಿಗೆ ಮಾತು ಬಂದದ್ದಕ್ಕೆ ಈ ಸತ್ಯ ಹೇಳತಿದೀನಿ. ಅಷ್ಟೇ ವಿನಾ ದ್ವೇಷಕ್ಕೆ ಹೇಳತಿಲ್ಲ, ಕೇಳಿಸಿಕೋ ತಪ್ಪು ತಿಳೀಬೇಡ.

ರೂಪಗೆಟ್ಟವನು ಕನ್ನಡೀಲಿ ಕಾಣೋವರೆಗೆ ತಾನೇ ಎಲ್ಲರಿಗಿಂತ ಚೆಲುವ ಅಂದುಕೊಂಡಿರತಾನೆ. ಆಮೇಲೆ ತನಗೂ ಬೇರೇವರಿಗೂ ಅಂತರ ಗೊತ್ತಾಗತ್ತೆ.

ತುಂಬಾ ಚೆಂದಕ್ಕಿರೋನು ಯಾರ ರೂಪಾನೂ ತಳ್ಳಿಹಾಕಲ್ಲ. ಆದರೆ ಅತೀ ಮಾತಾಡೋನು, ಕೆಟ್ಟ ಮಾತಾಡತಾ ಕೆಡುಕ ಆಗತಾನೆ. ಮೂರ್ಖರು ಇಂಥವರ ಮಾತು ಕೇಳಿಸಿಕೊಂಡು ಅವರು ಹೇಳಿದ ಒಳಿತು–ಕೆಡುಕಿನಲ್ಲಿ ಕೆಡುಕನ್ನೇ ಹೇಲು ತಿನ್ನೋ ಹಂದಿ ಹಾಗೆ ಒಳಕ್ಕೆ ತುಂಬಿಕೋತಾರೆ.

ತಿಳಿದವರು, ಅಂಥ ಒಳಿತು – ಕೆಡಕಿನ ಮಾತಲ್ಲಿ ಹಂಸ, ನೀರು ಬಿಟ್ಟು ಹಾಲು ಹೀರೋ ಹಾಗೆ ಒಳ್ಳೇದನ್ನ ಮಾತ್ರ ತಗೋತಾರೆ. ಬೇರೇವರಿಗೆ ಅಂದರೆ ಒಳ್ಳೆಯವರು ನೊಂದುಕೋತಾರೆ. ಅದೇ ಕೆಟ್ಟವರು ಖುಷಿಪಡತಾರೆ.

ನೋಡು ಸತ್ಯ ದೊಡ್ಡದು. ಅದೇ ಪರಬ್ರಹ್ಮ. ಅದಕ್ಕಿಂತ ದೊಡ್ಡ ಧರ್ಮ ಇಲ್ಲ. ಆ ಧರ್ಮಾನ ಕೈ ಬಿಡಬೇಡ ಸತ್ಯದ ಜೊತೆ ಕೂಡಿಕೋ ಸಾಕು.

ನೀನು ನಿನ್ನ ಸುಳ್ಳನ್ನೇ ಬಿಗಿಯಾಗಿ ಹಿಡಕೊಂಡರೆ, ನನ್ನಲ್ಲಿ ನಿನಗೆ ನಂಬಿಕೆ ಇಲ್ಲದಿದ್ದರೆ, ನಾನು ಸುತಾರಾಂ ಇಲ್ಲಿರಲ್ಲ. ನಿನ್ನಂಥವರ ಸಹವಾಸ ಬೇಡ ನನಗೆ.

ನೀನಿಲ್ಲದೇನೆ ನನ್ನ ಮಗ ಪರ್ವತರಾಜನನ್ನು ಮುಡಿಗೆ ಇಟ್ಟುಕೊಂಡ. ನಾಕು ಕಡಲು ಸುತ್ತುವರಿದ ಭೂಮೀನೆಲ್ಲ ಆಳೇ ಆಳತಾನೆ ಇವ.

ಈ ನಿನ್ನ ಮಗ ನೂರು ಯಾಗ ಮಾಡತಾನೆ ಅಂತ ಇಂದ್ರನೇ ಹೇಳಿದಾನೆ. ಅವನ ಮಾತು ಸುಳ್ಳಾಗಲ್ಲ. ದೇವತೆಗಳು ಸಾಕ್ಷಿ ಅಂತಾರೆ, ಅವರೂ ಸುಮ್ಮನಿದಾರೆ. ಸಾಕ್ಷಿಯಿಲ್ಲದ ಮಂದಭಾಗ್ಯೆ ನಾನು. ಬಂದ ದಾರಿ ಹಿಡಿದು ಹೊರಡತೀನಿ ಅಂತ ಹೊರಟು ನಿಂತಳು.

(ಆಗ ಅಂತರಿಕ್ಷದಿಂದ ಅಶರೀರವಾಣಿಯ ಸಾಕ್ಷಿ ಬಂತು. ‘ದುಷ್ಯಂತ ಇವನು ನಿನ್ನ ಮಗ, ಒಪ್ಪಿಕೋ’ ಅಂತ. ಅದು ದುಷ್ಯಂತನಿಗೂ ತಿಳಿದಿತ್ತು. ಅನಂತರ ಮಗನಿಗೆ ಭರತನೆಂದು ನಾಮಕರಣ ಮಾಡಿದರು. ಮುಂದೆ, ಅವನ ವಂಶಕ್ಕೆ ಭರತವಂಶವೆಂದೂ ಅವನ ವಂಶಿಕರಿಗೆ ‘ಭಾರತ’ರೆಂದೂ ಹೆಸರಾಯ್ತು.)